**ಪೊಲೀಸ್ ಅಧೀಕ್ಷಕರವರ ಕಛೇರಿ. ಬೆಂಗಳೂರು ಗ್ರಾಮಾಂತರ ಜಿಲ್ಲೆ.**

# ಪತ್ರಿಕಾ ಪ್ರಕಟಣೆ

**Workshop on how to Handle Explosives during Investigation**
**Dated 05-04-2021**

**Place: Sahyadri Meeting Hall, SP Office, Bangalore.**

**ಮಾನ್ಯ ಶ್ರೀ ಚಂದ್ರಶೇಖರ್ ಐ.ಪಿ.ಎಸ್. ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರವಲಯ, ಬೆಂಗಳೂರು ರವರ ಮಾರ್ಗದರ್ಶನದಲ್ಲಿ ಎಕ್ಸ್‌ಪ್ಲೋಸಿವ್ ಕಾರ್ಯಾಗಾರ ಸಭೆಯನ್ನು ಹಮ್ಮಿಕೊಳ್ಳಲಾಗಿರುತ್ತೆ.**

**ಉಪಸ್ಥಿತರು:–**

1. ಶ್ರೀ. ರವಿ ಡಿ. ಚನ್ನಣ್ಣನವರ್, ಐಪಿಎಸ್ ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ
2. ಶ್ರೀ. ಲಕ್ಷ್ಮೀಗಣೇಶ್, ಅಪರ ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ
3. ಶ್ರೀ. ಗೋವಿಂದರಾಮ ಎನ್, ಡೆಪ್ಯೂಟಿ ಕಂಟ್ರೋಲರ್ ಆಫ್ ಎಕ್‌ಪ್ಲೋಸಿವ್, ಮಂಗಳೂರು
4. ಶ್ರೀ. ರವೀಂದ್ರ, ಎಕ್ಸ್ ಅಸಿಸ್ಟೆಂಟ್ ಡೈರೆಕ್ಟರ್, ಎಫ್‌ಎಸ್.ಎಲ್ ಮಡಿವಾಳ, ಬೆಂಗಳೂರು
5. ಶ್ರೀ. ಆನಂದರಾಜ್, ಮೈನ್ಸ್ ಮ್ಯಾನೇಜರ್, ಬೆಂಗಳೂರು
6. ಬೆಂಗಳೂರು ಜಿಲ್ಲಾ ಎಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ವಿಷಯ ನಿರ್ವಾಹಕರು

****

ಕರ್ನಾಟಕ ರಾಜ್ಯ ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಸ್ಪೋಟಕಗಳು / ಜಿಲಿಟಿನ್ ಬಾಕ್ಸ್ ಬ್ಲಾಸ್ಟ್ ಆಗಿ ದುರಂತ ಸಂಭವಿಸಿರುವ ಹಿನ್ನಲೆಯಲ್ಲಿ ಬೆಂಗಳೂರು ಜಿಲ್ಲಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಎಕ್ಸ್‌ಪ್ಲೋಸಿವ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಕಾನೂನಾತ್ಮಕ ಮಾಹಿತಿಗಳ ಸಲಹೆ ಸೂಚನೆಗಳನ್ನು ನೀಡುವ ಸಲುವಾಗಿ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಬೆಂಗಳೂರು ಜಿಲ್ಲಾ "ಸಹ್ಯಾದ್ರಿ ಸಭಾಂಗಣ"ದಲ್ಲಿ ದಿನಾಂಕ 05–04–2021 ರಂದು **ಶ್ರೀ. ಗೋವಿಂದರಾಮ ಎನ್, ಡೆಪ್ಯೂಟಿ ಕಂಟ್ರೋಲರ್ ಆಫ್ ಎಕ್‌ಪ್ಲೋಸಿವ್, ಮಂಗಳೂರು ಮತ್ತು ಶ್ರೀ. ರವೀಂದ್ರ, ಎಕ್ಸ್ ಅಸಿಸ್ಟೆಂಟ್ ಡೈರೆಕ್ಟರ್, ಎಫ್‌ಎಸ್.ಎಲ್ ಮಡಿವಾಳ, ಬೆಂಗಳೂರು ಹಾಗೂ ಶ್ರೀ. ಆನಂದರಾಜ್, ಮೈನ್ಸ್ ಮ್ಯಾನೇಜರ್, ಬೆಂಗಳೂರು ರವರುಗಳ ಅಧ್ಯಕ್ಷತೆಯಲ್ಲಿ "Workshop on how to Handle Explosives during Investigation" ಕಾರ್ಯಾಗಾರ ಸಭೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ.**

ಸದರಿ ಕಾರ್ಯಾಗಾರ ಸಭೆಯಲ್ಲಿ ಡೆಪ್ಯೂಟಿ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸಿವ್, ಮಂಗಳೂರು, ಎಕ್ಸ್ ಅಸಿಸ್ಟೆಂಟ್ ಡೈರೆಕ್ಟರ್, ಎಫ್‌ಎಸ್.ಎಲ್ ಮಡಿವಾಳ, ಬೆಂಗಳೂರು ಮತ್ತು ಮೈನ್ಸ್ ಮ್ಯಾನೇಜರ್, ಬೆಂಗಳೂರು ರವರುಗಳು ಎಕ್ಸ್‌ಪ್ಲೋಸಿವ್‌ಗೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಈ ಕೆಳಕಂಡ ಅಂಶಗಳ ಬಗ್ಗೆ ಕಾನೂನಾತ್ಮಕವಾಗಿ ಚರ್ಚೆ ನಡೆಸಿರುತ್ತಾರೆ.

1. ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಎಕ್ಸ್‌ಪ್ಲೋಸಿವ್‌ಗೆ ಸಂಬಂಧಿಸಿದಂತೆ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಯಾವುದೇ ರೀತಿಯ ದುರಂತಗಳು ಸಂಭವಿಸದಂತೆ ಕೈಗೊಳ್ಳಬೇಕಾದ ಮುಂಜಾಗ್ರತಾ /ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ
2. ತನಿಖಾ ಸಂದರ್ಭದಲ್ಲಿ ಸದರಿ ಎಕ್ಸ್‌ಪ್ಲೋಸಿವ್‌ಗಳನ್ನು **ಪ್ಯಾಕಿಂಗ್ ಮಾಡುವಾಗ, ಜಪ್ತಿ ಮಾಡುವಾಗ ಹಾಗೂ ಟ್ರಾನ್ಸ್‌ಪೋಟೇಷನ್ ಮಾಡುವಾಗ** ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ
3. ಎಕ್ಸ್‌ಪ್ಲೋಸಿವ್‌ಗಳನ್ನು ಶೇಖರಣೆ ಮಾಡುವ **ಉಗ್ರಾಣ ಮಳಿಗೆಗಳ ಬಗ್ಗೆ ಮತ್ತು** ಎಕ್ಸ್‌ಪ್ಲೋಸಿವ್‌ಗಳನ್ನು **ವಿಲೇವಾರಿ (ಡಿಸ್‌ಪೋಸಲ್ )** ಮಾಡುವಾಗ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ
4. ಎಕ್ಸ್‌ಪ್ಲೋಸಿವ್ ಸ್ಥಳಗಳಲ್ಲಿ ಯಾವುದೇ ದುರಂತ /ಅನಾಹುತಗಳು ಸಂಭವಿಸದಂತೆ ಸಂಬಂಧಪಟ್ಟ ಕ್ವಾರೆ ಮಾಲೀಕರಾಗಲೀ ಅಥವಾ ಮೈನ್ಸ್ ರವರಾಗಲೀ ಯಾವ ರೀತಿಯ ಕ್ರಮಗಳನ್ನು ಅನುಸರಿಸಬೇಕು? ಅವರ ಪಾತ್ರ ಏನು? ಎಂಬ ಬಗ್ಗೆ
5. ಪೊಲೀಸ್ ಅಧೀಕಾರಿಗಳು ಮತ್ತು ಸಿಬ್ಬಂದಿಗಳು ಎಕ್ಸ್‌ಪ್ಲೋಸಿವ್ ಟ್ರಾಜಿಡಿಗೆ ಸಂಬಂಧಿಸಿದಂತೆ ದುರಂತ/ ಮಾಹಿತಿಗಳು ಬಂದ ಕೂಡಲೇ ಸ್ಥಳಕ್ಕೆ ಹೋದ ಸಂದರ್ಭದಲ್ಲಿ ಅವರು ಯಾವ ರೀತಿಯ ಕ್ರಮಗಳನ್ನು ಅನುಸರಿಸಬೇಕು ಎಂಬ ವಿಷಯಗಳ ಬಗ್ಗೆ **ಕಾರ್ಯಾಗಾರ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.**






(ರವಿ.ಡಿ.ಚನ್ನಣ್ಣನವರ್, ಐಪಿಎಸ್)
ಪೊಲೀಸ್ ಅಧೀಕ್ಷಕರು
ಬೆಂಗಳೂರು ಗ್ರಾಮಾಂತರ ಜಿಲ್ಲೆ